ಶ್ರೀ ವಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಆರೇಳು ವರ್ಷಗಳ ಹಿಂದೆಯೇ ಸುಮಾರು 20 ರಿಂದ 30 ಎಕರೆ ಜಮೀನನ್ನು ನಗರಸಭೆಗೆ ಸರ್ಕಾರ ಕೊಟ್ಟಿದೆ. ಬಹಳ ಪ್ರಭಾವಶಾಲಿ ವ್ಯಕ್ತಿಗಳು ಈ ಜಮೀನಿನ ಮೇಲೆ ಕೋರ್ಟ್‌ನಲ್ಲಿ ಸ್ಟೇ ತಂದಿದ್ದಾರೆ. ಇದನ್ನು ವೆಕೇಟ್ ಮಾಡಿಸಲು ಸರ್ಕಾರ ಒಬ್ಬ ವಕೀಲರನ್ನಿಟ್ಟು ಕ್ರಮ ತೆಗೆದುಕೊಳ್ಳಲು ಅವಕಾಶವಿದ್ದರೂ ಯಾವ ವಿಧವಾದ ಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ 200 ರಿಂದ 300 ನಿವೇಶನಗಳನ್ನು ಬಡವರಿಗೆ ಹಂಚಿದ್ದಾರೆ. ಆದರೆ ಯಾರಿಂದ ಹಣ ವಸೂಲಿ ಮಾಡಿಕೊಂಡಿದ್ದಾರೆ ಅಂಥವರಿಗೆ ಇದುವರೆಗೂ ನಿವೇಶನವನ್ನು ಕೊಟ್ಟಿಲ್ಲ. ಸ್ಟೇ ವೆಕೇಟ್ ಮಾಡಿಸುವುದಕ್ಕೆ ಹಾಗೂ ಬಡವರಿಗೆ ನಿವೇಶನ ಕೊಡುವುದಕ್ಕೆ ಸರ್ಕಾರ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ಈಗಾಗಲೇ 447 ನಿವೇಶನಗಳಿಗೆ ಹಣವನ್ನು ತೆಗೆದುಕೊಂಡಿರುವುದನ್ನು ನಾನು ಒಪ್ಪುತ್ತೇನೆ. 20" x 30" ಅಳತೆಯ ನಿವೇಶನಗಳಿಂದು ಮಾಡಿ ಜಿಲ್ಲಾಧಿಕಾರಿಗಳು ಲಾಟರಿ ಸಿಸ್ಟಂ ಮೂಲಕ ಬಡವರಿಗೆ ಈಗಾಗಲೇ ನಿವೇಶನವನ್ನು ಹಂಚಿಕೆ ಮಾಡಿದ್ದಾರೆ. ಈ ಬಡವರಿಗೆ ನಾಮಿನಲ್ ಛಾರ್ಜ್ ಎಂದು ಮಾಡಿದ್ದಾರೆ. 1979ರಲ್ಲಿ ಹಂಚಿರುವ 447 ನಿವೇಶನಗಳಿಗೆ ನಾಮಿನಲ್ ಛಾರ್ಜ್ ಎಂದು ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಆದರೆ ಇದರಲ್ಲಿ ಮಾತ್ರ ಯಾವುದೇ ರೀತಿಯಿಂದ ಹಣವನ್ನು ಕಲೆಕ್ಟ್ ಮಾಡಿಲ್ಲ. ಒಂದು ವೇಳೆ ಹಣವನ್ನು ಕಲೆಕ್ಟ್ ಮಾಡಿರುವ ಬಗ್ಗೆ ತಾವು ನಿದರ್ಶನವನ್ನು ನನಗೆ ಕೊಟ್ಟರೆ ಅದರ ಬಗ್ಗೆ ಎನ್‌ಕ್ವೈರಿಯನ್ನು ಮಾಡಿಸುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ಈಗಾಗಲೇ 447 ಸೈಟ್‌ಗಳನ್ನು ಹಂಚಿ ಕೊಟ್ಟುಬಿಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಮೊನ್ನೆ ಅಲ್ಲಿಗೆ ಹೋಗಿ ವೆಕೇಟ್ ಮಾಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿ ಕೆಲವು ಜನರು ಆರ್. ಸಿ. ಸಿ. ಮನೆಗಳನ್ನು ಕಟ್ಟುಬಿಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಸರ್ಕಾರಿ ವಕೀಲರನ್ನಿಟ್ಟು ಆದಷ್ಟು ಬೇಗ ಡಿಸ್‌ಪೋಸಲ್ ಮಾಡಿಸಬೇಕು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಪ್ರಕಾರ ನಮ್ಮ ಸರ್ಕಾರಿ ವಕೀಲರಿಂದ ತ್ವರಿತಗತಿಯಿಂದ ಇದರ ಬಗ್ಗೆ ನಿರ್ಣಯ ಆಗುವಂಥ ರೀತಿಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ. ಆದಷ್ಟು ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಬಿಜಾಪುರ, ಬಸವನಬಾಗೇವಾಡಿ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿರುವ ಕುರಿತು

207 (1584) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬಿಜಾಪುರ, ಬಸವನ ಬಾಗೇವಾಡಿ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿನ ಅಂತರ್ಜಲಮಟ್ಟ ಕೆಳಗಡೆ ಹೋಗಿದೆ ಎಂದು ಸದರಿ ತಾಲ್ಲೂಕುಗಳನ್ನು ಬೂದು ಮಿಶ್ರಿತ ಮತ್ತು

ಕಪ್ಪು ಮಿಶ್ರಿತ ಪಟ್ಟಿಗೆ ಸೇರಿಸಿದ್ದರಿಂದ ವಿದ್ಯುಚ್ಛಕ್ತಿ ಪ್ರಸರಣಾ ಮಂಡಳಿಯವರು ರೈತರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈಗ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಿಂದ ಸದರಿ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಮೇಲೆ ಬಂದಿರುವುದರಿಂದ ಸರ್ಕಾರ ತನ್ನ ಮೊದಲನೆ ನಿರ್ಧಾರವನ್ನು ಪುನರ್ ಪರಿಶೀಲಿಸಿ, ಈ ಹಿಂದೆ ವಿಧಿಸಿರುವ ನಿರ್ಬಂಧವನ್ನು ತೆಗೆದುಹಾಕಲಾಗುವುದೇ;

(ಇ) ಹಾಗಿದ್ದಲ್ಲಿ, ರೈತರ ಪಂಪ್‌ಸೆಟ್ಟುಗಳಿಗೆ ಮೊದಲಿನಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

(ಅ) ಇಂಡಿ ತಾಲ್ಲೂಕನ್ನು 'ಕಪ್ಪ' , ಬಸವನ ಬಾಗೇವಾಡಿ ಮತ್ತು ಬಿಜಾಪುರ ತಾಲ್ಲೂಕುಗಳನ್ನು 'ಬೂದು' ಮತ್ತು ಸಿಂಧಗಿ ತಾಲ್ಲೂಕನ್ನು 'ಬಿಳಿ' ಪ್ರದೇಶವೆಂದು ವರ್ಗೀಕರಿಸಲಾಗಿದೆ.

(ಆ) 31.12.1999ರ ಅಂತ್ಯಕ್ಕೆ ಇದ್ದಂತೆ ರಾಜ್ಯದಾದ್ಯಂತ ಅಂತರ್ಜಲ ಪುನರ್ ಮೌಲೀಕರಣ ಮಾಡುತ್ತಿರುವ ದಿಸೆಯಲ್ಲಿ ಬೇಕಾಗಿರುವ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದ್ದು, ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಹಾಗೂ ಮರು ವರ್ಗೀಕರಣಕ್ಕಾಗಿ ನಬಾರ್ಡ್ ಸಂಸ್ಥೆಗೆ ಕಳುಹಿಸಲಾಗುವುದು.

(ಇ) ನಬಾರ್ಡ್ ಸಂಸ್ಥೆಯ ಮರುವರ್ಗೀಕರಣದ ಆಧಾರದ ಮೇಲೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ಬಿಜಾಪುರ ಜಿಲ್ಲೆಯ ಇಂಡಿ, ಬಿಜಾಪುರ, ಬಸವನ ಬಾಗೇವಾಡಿ ಮತ್ತು ಸಿಂಧಗಿಯನ್ನು ಬೂದು ಮತ್ತು ಕಪ್ಪು ಪ್ರದೇಶವೆಂದು ಸೇರಿಸಿ ರೈತರ ಪಂಪ್‌ಸೆಟ್‌ಗಳಿಗೆ ಸುಮಾರು 8 ವರ್ಷಗಳಿಂದ ವಿದ್ಯುತ್ ಸರಬರಾಜನ್ನು ಕೊಡುತ್ತಿಲ್ಲ. ಆದರೆ ಮೂರ್ನಾಲ್ಕು ವರ್ಷಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಹಿನ್ನೀರಿನಿಂದ ಮತ್ತು ಕೃಷ್ಣಾ ನದಿಯಲ್ಲಿರತಕ್ಕಂಥ ಬ್ಯಾರೇಜ್‌ಗಳಿಂದ ಕೆರೆಯ ಕೆಳಗಿನ ಭಾಗ ಹಾಗೂ ದಂಡೆಯ ಭಾಗದಲ್ಲಿ ಮತ್ತು ಇನ್ನಿತರ ಭಾಗಗಳಲ್ಲಿ ರೈತರ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿದೆ. ನೀರು ಬಿದ್ದರೂ ಕೂಡ ವಿದ್ಯುತ್ ಸಂಪರ್ಕವಿಲ್ಲದೇ ಅಲ್ಲಿನ ರೈತರು ಒಂದು ರೀತಿಯಲ್ಲಿ ಊಟವಿದ್ದರೂ ಕೂಡ ಉಪವಾಸ ಮಾಡುವ ಪರಿಸ್ಥಿತಿ ನಿರ್ಮಾಣವಾದಂತಿದೆ. ಆದರೆ ಮಾನ್ಯ ಸಚಿವರು ಉತ್ತರದಲ್ಲಿ ದಿನಾಂಕ 31.12.1999ರ ಆದೇಶದ ಪ್ರಕಾರ ರಾಜ್ಯದೆಲ್ಲೆಡೆ ಮರು ಮೌಲ್ಯ ಮಾಡಿ ಅಂತರ್ಜಲದ ಬಗ್ಗೆ ನಬಾರ್ಡ್ ಸಂಸ್ಥೆಯಿಂದ ಮತ್ತೊಮ್ಮೆ ವರದಿಯನ್ನು ತರಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಬಿಜಾಪುರದ ಬಗ್ಗೆ ವಿಶೇಷ ಆದ್ಯತೆಯನ್ನು ಕೊಡಬೇಕು. ಏಕೆಂದರೆ ಆ ಜಿಲ್ಲೆ ಮೊದಲೇ ಬರಗಾಲ ಪ್ರದೇಶವಾಗಿದೆ. ಈಗ ಸಿಕ್ಕಿರುವಂಥ ಸ್ವಲ್ಪ ನೀರನ್ನಾದರೂ ಅಲ್ಲಿನ ರೈತರು ಉಪಯೋಗಪಡಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಲು ಸರ್ಕಾರ ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ. ಇನ್ನು

ಅಲ್ಲಿ ಸರ್ವೆ ಕಾರ್ಯವನ್ನು ಎಷ್ಟು ದಿನದೊಳಗೆ ಮಾಡಲಾಗುವುದು ಎಂಬ ಬಗ್ಗೆ ಸರ್ಕಾರದವರು ತಿಳಿಸಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅಂತರ್ಜಲ ಮೌಲೀಕರಣ ಸಮಿತಿ ಪ್ರತಿ 5 ವರ್ಷಗಳಿಗೊಮ್ಮೆ ಸಮೀಕ್ಷೆಯನ್ನು ನಡೆಸುತ್ತದೆ. 1994ರ ಸಮೀಕ್ಷೆ ಪ್ರಕಾರ 4 ತಾಲ್ಲೂಕುಗಳಲ್ಲೂ ಸುಮಾರು 83 ರಿಂದ 84 ಪರ್ಸೆಂಟ್ ಅಂತರ್ಜಲ ಬಳಕೆ ಆಗಿದೆಯೆಂದು ಹೇಳಿ ಅವುಗಳನ್ನು ಕಪ್ಪು ಮತ್ತು ಬೂದು ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಇವುಗಳಲ್ಲಿ ಸಿಂಧಗಿ ತಾಲ್ಲೂಕಿನಲ್ಲಿ ಕೇವಲ 65 ಪರ್ಸೆಂಟ್‌ನೊಳಗೆ ಬರುತ್ತಿರುವುದರಿಂದ ಅದನ್ನು ಬಿಳಿ ಪ್ರದೇಶವೆಂದು ಘೋಷಣೆ ಮಾಡಿರುವುದರಿಂದ ಈಗ ಸಿಂಧಗಿ ತಾಲ್ಲೂಕಿಗೆ ಯಾವುದೇ ರೀತಿಯ ನಿರ್ಬಂಧವಿರುವುದಿಲ್ಲ. 31.12.1999ರ ಅಂತ್ಯಕ್ಕೆ ಈಗಾಗಲೇ ಸಮೀಕ್ಷೆ ನಡೆದಿದ್ದು ವರದಿಯನ್ನು ನಬಾರ್ಡ್‌ಗೆ ಕಳುಹಿಸಿಕೊಟ್ಟಿದ್ದೇವೆ. ವರದಿಯ ಆಧಾರದ ಮೇಲೆ ಯಾವ ತಾಲ್ಲೂಕು ಕಪ್ಪು ಯಾವ ತಾಲ್ಲೂಕು ಬೂದು ಮತ್ತು ಯಾವ ತಾಲ್ಲೂಕು ಬಿಳಿ ಪ್ರದೇಶವೆಂದು ಅವರು ತೀರ್ಮಾನ ಮಾಡುತ್ತಾರೆ. ಕೇಂದ್ರ ಸರ್ಕಾರದಿಂದ ಅದು ಬಂದ ತಕ್ಷಣ ನಾವು ಘೋಷಣೆಯನ್ನು ಮಾಡುತ್ತೇವೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಅಲ್ಲಿಯವರೆಗೆ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡುವ ಹಾಗೆ ಕೆ. ಇ. ಬಿ. ಯವರಿಗೆ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಇದು ಸಂಪೂರ್ಣವಾಗಿ ನಬಾರ್ಡ್‌ಗೆ ಸಂಬಂಧಪಟ್ಟಿರುವಂಥಾದ್ದು: ನಾವು ಸಮೀಕ್ಷೆಯನ್ನು ಮಾಡಿ ಇಂಥಿಂಥ ತಾಲ್ಲೂಕುಗಳಲ್ಲಿ ಅಂತರ್ಜಲ ಪರಿಸ್ಥಿತಿ ಈ ರೀತಿಯಾಗಿದೆ ಎಂಬ ವರದಿಯನ್ನು ಅವರಿಗೆ ಕಳುಹಿಸಿಕೊಡುತ್ತೇವೆ. ಇದಾದ ಮೇಲೆ ಕಪ್ಪು, ಬೂದು, ಬಿಳಿ, ಪ್ರದೇಶವೆಂದು ವರ್ಗೀಕರಣ ಮಾಡುವಂತಹ ಅಧಿಕಾರ ನಬಾರ್ಡ್ ಸಂಸ್ಥೆಯವರಿಗಿದೆ. ಅದು ಬಂದ ತಕ್ಷಣ ನೀವು ಈಗ ಹೇಳಿದ ಹಾಗೆ ಏನು ಇತ್ತೀಚೆಗೆ ಅಂತರ್ಜಲ ವೃದ್ಧಿಯಾಗಿದೆ ಎನ್ನುವಂಥಾದ್ದು ವಾಸ್ತವವಾದರೆ ತತ್‌ಕ್ಷಣ ನಾವು ಆ ಪ್ರದೇಶವನ್ನು ಬಿಳಿ ಪ್ರದೇಶವೆಂದು ಘೋಷಣೆ ಮಾಡುತ್ತೇವೆ. ತಾವು ಕೇಳಿರುವ ಎಲ್ಲಾ ರಿಲೀಫ್ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಅಧ್ಯಕ್ಷರೆ, ರೈತರ ಪಂಪ್‌ಸೆಟ್‌ಗಳ ಗತಿ ಏನು ಎಂದು ನಾನು ಕೇಳುವಂಥಾದ್ದು.

ಶ್ರೀ ಪಿ. ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಇವತ್ತು ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಹಿಂದಿನ ಎಲ್ಲಾ ಸರ್ಕಾರಗಳು ನಿರ್ಲಕ್ಷ್ಯ ತಾಳಿದಂತಹ ಸಂದರ್ಭದಲ್ಲಿ ಬಡ ರೈತ....

ಅಧ್ಯಕ್ಷರು : ಈಗ ಅಂತರ್ಜಲಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಇರುವಂಥಾದ್ದು, ತಾವು ನೀರಾವರಿ ಯೋಜನೆಯ ಬಗ್ಗೆ ಹೇಳುತ್ತಿದ್ದೀರಿ, ಇವೆರಡಕ್ಕೂ ಏನು ಸಂಬಂಧವಿದೆ?

ಶ್ರೀ ಪಿ. ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಆ ರೈತರು ಹತ್ತು, ಇಪ್ಪತ್ತು ಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿಕೊಂಡು ಬೋರ್‌ವೆಲ್ ಹಾಕಿಕೊಂಡು ತಮ್ಮ ಹೊಲವನ್ನು ಹಸಿರಾಗಿಟ್ಟುಕೊಂಡು ಬದುಕಬೇಕೆಂಬ ವ್ಯವಸ್ಥೆಗೂ ಸರ್ಕಾರ ಕಲ್ಲು ಹಾಕುತ್ತಿದೆ. ಅಲ್ಲಿ ನಿಜವಾಗಲೂ ಅಂತರ್ಜಲದ ಮಟ್ಟ ಹೆಚ್ಚಾಗಿದೆ. ಇವತ್ತು ನೀರಾವರಿ ಯೋಜನೆಯಿಂದ, ಆಲಮಟ್ಟಿ ಜಲಾಶಯದಿಂದ, ಹಿಪ್ಪರಗಿ ಬ್ಯಾರೇಜ್‌ನಿಂದಾಗಿ ಇದರ ಜೊತೆಗೆ ಭೂಕಂಪ ಸಂಭವಿಸಿದ ಕಾರಣದಿಂದ ಕೂಡ ಈ ಅಂತರ್ಜಲ ಹೆಚ್ಚಾದಂತಹ ಸಂದರ್ಭದಲ್ಲಿ ತಾವು ತಕ್ಷಣ ಈ ಸರ್ವೆ ಕೆಲಸವನ್ನು ಮಾಡಿಸಬೇಕು. ರೈತರು ಎಲ್ಲೆಲ್ಲಿ ಅನಧಿಕೃತವಾಗಿ ವಿದ್ಯುತ್ ಅನ್ನು ಬಳಸಿಕೊಂಡಿದ್ದಾರೆ, ಅದನ್ನು ತಾವು ಸರಿಪಡಿಸಿ ತಕ್ಷಣ ಅವರಿಗೆ ಅಂತರ್ಜಲ ನೀರು ಅನುಕೂಲವಾಗುವ ಹಾಗೆ ಇನ್ನು ಐದಾರು ತಿಂಗಳುಗಳಲ್ಲಿ ಸರ್ವೆ ಕೆಲಸವನ್ನು ಮಾಡಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿ ಐದು ವರ್ಷಕ್ಕೆ ಒಮ್ಮೆ ಅಂತರ್ಜಲ ಮೌಲೀಕರಣದ ಸಮೀಕ್ಷೆ ನಡೆಯುತ್ತದೆ. ಎಲ್ಲೆಲ್ಲಿ ಅಂತರ್ಜಲ ವೃದ್ಧಿಯಾಗಿದ್ದರೆ ಅಲ್ಲಿ ನಿರ್ಬಂಧವನ್ನು ತೆಗೆದು ಹಾಕುತ್ತಾರೆ, ಎಲ್ಲೆಲ್ಲಿ ಅಂತರ್ಜಲ ಕಡಿಮೆಯಾಗಿರುತ್ತದೆ ಆ ನಿರ್ಬಂಧವನ್ನು ಮುಂದುವರೆಸುತ್ತಾರೆ. ಇದು ನಬಾರ್ಡ್‌ನವರು ಕೊಟ್ಟಿರುವಂತಹ ಗೈಡ್‌ಲೈನ್ಸ್ ಆಗಿದೆ. ತಮಗೂ ಗೊತ್ತಿರುವಂತೆ ಇತ್ತೀಚೆಗೆ ಈ ಅಂತರ್ಜಲ ಬಳಕೆ ಹೆಚ್ಚಾಗಿದ್ದು ಇವತ್ತು ಈ ಅಂತರ್ಜಲ ಮಟ್ಟ ನಮ್ಮ ಕೋಲಾರ ಜಿಲ್ಲೆ ಮತ್ತೆ ಬೇರೆ ಜಿಲ್ಲೆಗಳಲ್ಲೂ ಆರುನೂರು, ಏಳುನೂರು ಅಡಿಗಳಷ್ಟು ಕೆಳಗಡೆ ಹೋಗಿರುವುದನ್ನು ನಾವು ನೋಡಿದ್ದೇವೆ. ಇದನ್ನು ನಾವು ನಿರ್ಬಂಧ ಮಾಡದೇ ಹೋದರೆ ಮತ್ತಷ್ಟು ಕಷ್ಟವಾಗುತ್ತದೆ. ಈಗಾಗಲೇ ನಾವು ಫ್ಲೋರಿಸಿಸ್ ಇದೆ ಎನ್ನುವಂಥಾದ್ದನ್ನು ನೋಡಿದ್ದೇವೆ. ಅದರಿಂದ ಆಗುತ್ತಿರುವಂತಹ ಅನಾಹುತಗಳು ಮತ್ತು ಪರಿಣಾಮಗಳನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ನೇರವಾಗಿ ಪ್ರತಿ ಐದು ವರ್ಷಗಳಿಗೆ ಸಮೀಕ್ಷೆಯನ್ನು ಮಾಡಿ ಎಲ್ಲೆಲ್ಲಿ ಅಂತರ್ಜಲ ವೃದ್ಧಿಯಾಗಿದೆ ಎಂದು ತಿಳಿದುಕೊಂಡು , ಅದರ ಪ್ರಕಾರ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಅಧ್ಯಕ್ಷರೆ, ಅನಧಿಕೃತವಾಗಿ ಪಂಪ್-ಸೆಟ್‌ಗಳನ್ನು ಜೋಡಿಸಲಾಗಿದೆ, ನೀರಾವರಿಯ ಸಲುವಾಗಿ ಕೆ. ಇ. ಬಿ. ಯವರಿಗೆ ತಿಳಿಸಿ ಅದನ್ನು ಅಧಿಕೃತವೆಂದು ಘೋಷಣೆ ಮಾಡುವಂಥಾದ್ದಕ್ಕೆ ತಾವು ಸೂಚನೆಯನ್ನಾದರೂ ಕೊಡಬೇಕು.

ಶ್ರೀ ವಿ. ಮುನಿಯಪ್ಪ : ಈಗಾಗಲೇ ಸಮೀಕ್ಷೆ ವರದಿ ಬಂದಿದೆ, ಅದನ್ನು ನಬಾರ್ಡ್‌ನವರಿಗೆ ಕಳುಹಿಸಿಕೊಡುತ್ತಿದ್ದೇವೆ. ಕಪ್ಪು, ಬೂದು, ಬಿಳಿ, ಪ್ರದೇಶವೆಂದು ನಿರ್ಧಾರ ಮಾಡುವವರು ನಬಾರ್ಡ್‌ನವರು ಆದುದರಿಂದ ಅಲ್ಲಿಂದ ಬಂದ ತಕ್ಷಣ ಡಿಕ್ಲೇರ್ ಮಾಡಿ ತಿಳಿಸುತ್ತೇವೆ.

(ಗೊಂದಲ)

ಶ್ರೀ ಸುಣಗಾರ ಶರಣಪ್ಪ ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಹತ್ತು ಸಾವಿರಕ್ಕೂ ಹೆಚ್ಚಿಗೆ ಪಂಪ್ ಸೆಟ್‌ಗಳಿಗಾಗಿ ಅರ್ಜಿಗಳು ಹತ್ತು ವರ್ಷಗಳಿಂದ ಬಂದಿದ್ದು, ಇದರಲ್ಲಿ ಕೇವಲ ಮೂರು ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಕೊಟ್ಟಿಲ್ಲ. ಇದು ಬಿಳಿ ಪ್ರದೇಶಕ್ಕೆ ಸೇರಿದ್ದರೂ

ಸಹಿತ ಇದುವರೆಗೂ ಕನೆಕ್ಷನ್ ಕೊಟ್ಟಿಲ್ಲ. ಇದುವರೆಗೆ ವಿದ್ಯುತ್ ಕನೆಕ್ಷನ್ ಏಕೆ ಕೊಟ್ಟಿಲ್ಲ, ಏಕೆ ತಡವಾಯಿತು, ಎಷ್ಟು ದಿವಸಗಳಲ್ಲಿ ಕೊಡುತ್ತೀರೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು : ಈ ವಿಷಯವನ್ನು ವಿದ್ಯುತ್ ಸಚಿವರ ಬಳಿ ಕೇಳಿ ಅವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

ಕೆ. ಷಡಾಕ್ಷರಿ : ಮಾನ್ಯ ಅಧ್ಯಕ್ಷರೆ, ಇವರು ಎಂಟು ವರ್ಷಗಳಿಂದ ಎಂಟು ತಾಲ್ಲೂಕುಗಳನ್ನು ಕಷ್ಟ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಈಗ ತುಮಕೂರು ಜಿಲ್ಲೆಯಲ್ಲಿ ಮತ್ತೆ ರೀ-ಸರ್ವೆ ಮಾಡಿ ಅದನ್ನು ಲಿಫ್ಟ್ ಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆಯೇ? ಅಥವಾ ಮತ್ತೆ ಹೊಸದಾಗಿ ಸರ್ವೆ ಮಾಡಿಸುತ್ತಾರೆಯೇ, ಅಥವಾ ಮಾಡಿಸಿರುವುದರಲ್ಲಿ ನಮ್ಮ ಪ್ರದೇಶವೂ ಪಟ್ಟಿಯಲ್ಲಿ ಸೇರಿದೆಯೇ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಅಧ್ಯಕ್ಷರು : ತಾವು ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿ; ಈಗ ತಾವು ತುಮಕೂರು ಜಿಲ್ಲೆಯ ಬಗ್ಗೆ ಕೇಳಿದರೆ ಅದಕ್ಕೆ ಉತ್ತರ ಎಲ್ಲಿ ಇರುತ್ತದೆ?

ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸುವ ಬಗ್ಗೆ

209 (2240) : **ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) :** ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ಸರ್ಕಾರ ನೀಡಿರುವ ಸೌಲಭ್ಯಗಳೇನು;

(ಆ) ರೇಷ್ಮೆ ಬೆಳೆಯುವಲ್ಲಿ ಪ್ರಗತಿ ಸಾಧಿಸಿರುವ ಬಗ್ಗೆ ತಾಲ್ಲೂಕುವಾರು ಕ್ಷೇತ್ರದ ವಿವರ ಒದಗಿಸುವುದು;

(ಇ) ಧಾರವಾಡ ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿ ಇರುವ ಸಿಬ್ಬಂದಿಯ ವಿವರ ಹಾಗೂ ಈ ಬಗ್ಗೆ ಆಗುತ್ತಿರುವ ಖರ್ಚಿನ ಬಗ್ಗೆ ಪ್ರತ್ಯೇಕ ವಿವರ ಒದಗಿಸುವುದು;

ಶ್ರೀ ಎಂ ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಪ್ರಗತಿಯಲ್ಲಿದೆ. ರಾಜ್ಯ ಮತ್ತು ಜಿಲ್ಲಾವಲಯ ಯೋಜನೆಯಡಿ ರೇಷ್ಮೆ ಕೃಷಿ ಬಗ್ಗೆ ಕ್ಷೇತ್ರೋತ್ಸವ, ಕಾರ್ಯಾಗಾರಗಳು ವಸ್ತು ಪ್ರದರ್ಶನ ಏರ್ಪಡಿಸುವುದು, ದ್ವಿತಳಿಗೂಡಿಗೆ ಪ್ರೋತ್ಸಾಹ ನೀಡುವುದು, ರೇಷ್ಮೆ ಬೆಳೆಗಾರರ ಮನೆಗಳನ್ನು ಸೋಂಕು ನಿವಾರಕಗಳಿಂದ ಕಾಲಾನುಕಾಲಕ್ಕೆ ಶುದ್ದೀಕರಿಸಲು ರೋಗ ನಿಯಂತ್ರಣ ಕಾರ್ಯಕ್ರಮ ಕೈಗೊಳ್ಳುವುದು, ರೇಷ್ಮೆ ಹುಳು ಸಾಕಣೆಯಲ್ಲಿ ರೆಂಬೆ ಪದ್ಧತಿ ಕೈಗೊಳ್ಳುವವರಿಗೆ ಸಹಾಯ ಧನ ನೀಡುವುದು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರಿಗೆ ಪ್ರತ್ಯೇಕ ಮನೆ ನಿರ್ಮಾಣಕ್ಕೆ ಸಹಾಯಧನ, ರೇಷ್ಮೆ